# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ.ಹೆಸರು | : | ಶ್ರೀ ಹೆಚ್.ಎಸ್‌ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **300** |
| ಉತ್ತರಿಸಬೇಕಾದ ದಿನಾಂಕ | : | 15.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿ.ಎಂ.ಎ.ವೈ) ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿರುವ ಪ್ರತಿ ವಸತಿ ಘಟಕ ನಿರ್ಮಾಣದ ವೆಚ್ಚವೆಷ್ಟು;</td><td>
ಪ್ರಧಾನ ಮಂತ್ರಿ ಆವಾಸ್ ಯೋಜನೆ (ಪಿ.ಎಂ.ಎ.ವೈ) ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ನೀಡುತ್ತಿರುವ ಸಹಾಯಧನದ ವಿವರ ಕೆಳಕಂಡಂತಿದೆ.
(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ. ಸಂ</th><th rowspan="2">ಯೋಜನೆ</th><th colspan="2">ಗ್ರಾಮೀಣ</th><th colspan="2">ನಗರ</th></tr>
<tr><th>ಸಾಮಾನ್ಯ / ಅಲ್ಪ ಸಂಖ್ಯಾತ</th><th>ಪ.ಜಾ/ ಪ. ಪಂಗಡ</th><th>ಸಾಮಾನ್ಯ / ಅಲ್ಪ ಸಂಖ್ಯಾತ</th><th>ಪ.ಜಾ/ ಪ. ಪಂಗಡ</th></tr>
<tr><td>1</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾ)*</td><td>1.20</td><td>1.75</td><td>-</td><td>-</td></tr>
<tr><td>2</td><td>ಪ್ರಧಾನ ಮಂತ್ರಿ ಆವಾಸ್ ಯೋಜನೆ (ನ)**</td><td>-</td><td>-</td><td>1.50</td><td>1.50</td></tr>
</table>
ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾಮೀಣ) ಅಡಿಯಲ್ಲಿ ಪರಿಶಿಷ್ಟಜಾತಿ/ಪಂಗಡದವರಿಗೆ 1.75 ಲಕ್ಷಗಳು (ಕೇಂದ್ರದ ಪಾಲು 72000/- ರಾಜ್ಯದ ಪಾಲು 48000 ನೊಂದಿಗೆ ಹೆಚ್ಚುವರಿಯಾಗಿ 55000/-). ಸರ್ಕಾರದ ಆದೇಶ ಸಂಖ್ಯೆ: ವಇ 83 ಹೆಚ್‌ಎಹೆಚ್ 2019, ದಿನಾಂಕ :03.03.2022 ರಲ್ಲಿ ಪರಿಶಿಷ್ಟ ಜಾತಿ/ ಪಂಗಡದವರಿಗೆ 1.50 ಲಕ್ಷಗಳಿಂದ 1.75 ಘಟಕ ವೆಚ್ಚವನ್ನು ನೀಡಲು ಆದೇಶಿಸಿದೆ.
</td></tr>
<tr><td>ಆ)</td><td>ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ನಿರ್ಮಾಣದ ವೆಚ್ಚವು ವಿಭಿನ್ನವಾಗಿದೆಯೇ; ಹಾಗಿದ್ದಲ್ಲಿ ಎರಡೂ ಪ್ರದೇಶಗಳಿಗೆ ಹಂಚಿಕೆಯನ್ನು ಸಮಾನವಾಗಿಸಲು ಸರ್ಕಾರ ಯಾವುದಾದರೂ</td><td>ಗ್ರಾಮೀಣ ಪ್ರದೇಶದಲ್ಲಿ ಮನೆ ನಿರ್ಮಿಸಲು ಸ್ಥಳೀಯವಾಗಿ ಲಭ್ಯವಾಗುವ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು (ಕಲ್ಲು, ಮಣ್ಣು, ಕಟ್ಟಿಗೆ, ಮರಳು) ಬಳಸುವುದರಿಂದ, ಸಾಮಗ್ರಿಗಳ ಸಾಗಾಣಿಕೆ ವೆಚ್ಚ ಕಡಿಮೆಯಾಗುವುದರಿಂದ, ಕಾರ್ಮಿಕರು</td></tr>
</table>

| | | |
|---|---|---|
| | ಯೋಜನೆಯನ್ನು ರೂಪಿಸಲಾಗಿದೆಯೇ; | ಕಡಿಮೆ ದಿನಗೂಲಿ ಮೊತ್ತದಲ್ಲಿ ನಿರ್ಮಿಸಲು ಲಭ್ಯವಾಗುವುದರಿಂದ, ನಿವೇಶನಗಳ ಬೆಲೆಯೂ ನಗರ ಪ್ರದೇಶದ ಹೋಲಿಕೆಯಲ್ಲಿ ಕಡಿಮೆ ಇರುವುದರಿಂದ ಗ್ರಾಮೀಣ ಪ್ರದೇಶದಲ್ಲಿ ಮನೆಯ ನಿರ್ಮಾಣ ವೆಚ್ಚವು ನಗರ ಪ್ರದೇಶದ ಹೋಲಿಕೆಯಲ್ಲಿ ಕಡಿಮೆ ಇದ್ದು, ಇದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶದ ಫಲಾನುಭವಿಗಳಿಗೆ ಪ್ರಸ್ತುತ ಒದಗಿಸಲಾಗುತ್ತಿರುವ ಸಹಾಯಧನ ಮೊತ್ತದಲ್ಲಿ ವ್ಯತ್ಯಾಸವಿರುತ್ತದೆ. |
| ಇ) | ಉಭಯ ಪ್ರದೇಶಗಳ ನಿರ್ಮಾಣ ಸಾಮಗ್ರಿಗಳನ್ನು ಒಂದೇ ಸ್ಥಳದಿಂದ ತರುತ್ತಿರುವುದರಿಂದ ಎರಡೂ ಪ್ರದೇಶಗಳ ಯೋಜಿತ ವೆಚ್ಚವನ್ನು ಅದೇ ನಿಯತಾಂಶಗಳಲ್ಲಿ ಅಳೆಯುವುದು ಸಾಧ್ಯವಾಗಿದ್ದು, ಈ ಬಗ್ಗೆ ಸರ್ಕಾರ ಪರಿಶೀಲಿಸುವುದೇ ? | |

ಸಂಖ್ಯೆ :ವಇ 51 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು